ಶ್ರೀ ಕಾಗೋಡು ತಿಮ್ಮಪ್ಪ.—ಸ್ವೀ ಸೈಟುಗಳನ್ನು ಎ೧.ಎಲ್.ಎ.ಗಳು ಅಧಿಕಾರಿಗಳು ಇವರಿಗೆ ಅವರು ಈ ಊರಿನಲ್ಲಿರಲಿ, ಇಲ್ಲದೆ ಇರಲಿ ಕೊಟ್ಟಿದ್ದಾರೆ. ಸ್ವೀ ಸೈಟುಗಳನ್ನು ಕೊಡುವಾಗ ಏನು ಅರ್ಹತೆ ಇರಬೇಕು ಎನ್ನುವುದನ್ನು ನಿರ್ಧಾರ ಮಾಡಿದ್ದಾರೆಯೇ ! ಆ ತರಹ ಮಾಡಿದ್ದರೆ ಏನು ಅರ್ಹತೆ ಇರಬೇಕು ?

ಶ್ರೀ ಡಿ. ಕೆ. ನಾಯ್ಕರ್.—ಸೈಟುಗಳನ್ನು ಹಂಚಲು ನಿಯಮಗಳನ್ನು ಮಾಡಿದ್ದೇವೆ. ರೂಲ್ 3 ರಲ್ಲಿ ಯಾವರೀತಿ ಇರಬೇಕು ಎಂದು ಹೇಳಿದ್ದೇವೆ ಮತ್ತು ರೂಲ್ 5 ಮತ್ತು 10 ರಲ್ಲಿ ಎಲಜಿಬಲಟಿ ವಿಚಾರವಿದೆ. ಆ ನಿಯಮದ ಪ್ರಕಾರ ಹಂಚುತ್ತಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಸ್ವೀ ಸೈಟುಗಳನ್ನು ಕೊಡುವಾಗ, ಎಲ್ಲರೂ ಸೈಟಿಲ್ಲ, ಬೆಂಗಳೂರು ನಗರ ಪ್ರದೇಶದಲ್ಲಿ ತಮ್ಮ ಮತ್ತು ಕುಟುಂಬದವರಿಗೆ ಸೈಟುಗಳಿಲ್ಲ ಎಂದು ಅಫಿಡವಿಟ್ ತೆಗೆದುಕೊಳ್ಳಲಾಗುತ್ತದೆ. ಆ ರೀತಿ ತೆಗೆದುಕೊಳ್ಳಲಾಗಿ ಯೇ ?

ಶ್ರೀ ಡಿ. ಕೆ. ನಾಯ್ಕರ್.—ರೂಲ್ಸ್ ಪ್ರಕಾರ ಪಬ್ಲಿಕೇಷನ್ ಮಾಡಿ ಅಪ್ಲಿಕೇಷನ್ ಕರೆಯ ಬೇಕು ಎಂದು ಇದೆ. ಅಪ್ಲಿಕೇಷನ್ ನ್ಯೂಟಿನಿ ಮಾಡಿದ ನಂತರ ಅಫಿಡವಿಟ್ ಕೊಡಬೇಕು. ಸಂಶಯ ಬಂದಾಗ ಕೋರ್ಟಿನಿಂದ ಆ ತರಹ ಅಫಿಡವಿಟ್ ತರಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಟ್ರಸ್ಟ್ ಬೋರ್ಡ್ ರೆಗ್ಯುಲೇಷನ್ ಪ್ರಕಾರ ಅಫಿಡವಿಟ್ ಕೊಡಬೇಕು ಎನ್ನುವುದು ಕಡ್ಡಾಯವಾದುದು. ಅನುಮಾನ ಬಂದಾಗ ಮಾತ್ರ ಕೊಡಬೇಕೆಂದಿಲ್ಲ.

ಶ್ರೀ ಡಿ. ಕೆ. ನಾಯ್ಕರ್.—ಈಗ ನನಗೆ ತಿಳಿದಮಟ್ಟಿಗೆ ಪ್ರತಿಯೊಬ್ಬರಿಂದಲೂ ತೆಗೆದುಕೊಳ್ಳುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ಸ್ವೀ ಸೈಟುಗಳನ್ನು ಕೊಟ್ಟಿರುವವರೆಲ್ಲರಿಂದಲೂ ಅಫಿಡವಿಟ್ ಗಳನ್ನು ತೆಗೆದುಕೊಂಡಿದ್ದಾರೆಯೇ ಎನ್ನುವುದನ್ನು ಹೇಳುತ್ತಾರೆಯೇ ?

ಶ್ರೀ ಡಿ. ಕೆ. ನಾಯ್ಕರ್.—ನೋಟೀಸ್ ಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವೀ ಸೈಟುಗಳನ್ನು ಕೊಡತಕ್ಕ ಕಾಲದಲ್ಲಿ ಸೈಟುಗಳನ್ನು ಯಾರು ತೆಗೆದುಕೊಂಡಿದ್ದಾರೆ ಅವರಿಗಾಗಲೀ, ಅವರ ಕುಟುಂಬದವರಿಗಾಗಲೀ ಬೇರೆ ಸೈಟುಗಳಿದ್ದರೆ ಈಗ ಕೊಟ್ಟಿರತಕ್ಕ ಸೈಟನ್ನು ವಜಾ ಮಾಡುತ್ತಾರೆಯೇ ?

ಶ್ರೀ ಡಿ. ಕೆ. ನಾಯ್ಕರ್.—ಸೈಟುಗಳನ್ನು ಕೊಟ್ಟಾದ ಬಗ್ಗೆ ಸರ್ಕಾರ ತನಗಿರುವ ಅಧಿಕಾರದ ಮೇಲೆ ಪ್ರೊಸೀಡಿಂಗ್ಸ್ ಕಾಲ್‌ಫಾರ್ ಮಾಡಿದ್ದು ಎಗ್ಜಾಮಿನ್ ಮಾಡುವಂಥ ಹಂತದಲ್ಲಿದೆ. ಅದರಲ್ಲಿ ನ್ಯೂನತೆಗಳು ಕಂಡುಬಂದರೆ ಸರಿಯಾದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಪ್ರೊಸೀಡಿಂಗ್ಸ್ ಯಾವಾಗ ಕಾಲ್‌ಫಾರ್ ಮಾಡಿದ್ದಾರೆ ? ಇದು ವರೆಗೆ ಪ್ರೊಸೀಡಿಂಗ್ಸ್ ಬಂದಿದೆಯೇ ?

ಶ್ರೀ ಡಿ. ಕೆ. ನಾಯ್ಕರ್.—ಯಾವ ತಾರೀಖು ಎನ್ನುವುದು ನೆನಪಿಲ್ಲ. ಪ್ರೊಸೀಡಿಂಗ್ಸ್ ಬಂದಿದೆ ಎಂದು ಮಾತ್ರ ಹೇಳುತ್ತೀನೆ.

Selection Time Scale to Primary School Teachers

163. Sri B. G. BANAKAR (Hirekerur).—

Will the Minister for Education be pleased to state :—

(*a*) the number of primary school teachers for whom selection time scale has been sanctioned from 1st January 1970 as per the recommendations of the Tukol Pay Commission ;

(*b*) the number of primary school teachers who have put in service from 20 years to 30 years, and more than 30 years up to 1st January 1970 ;

(*c*) whether Government intend to grant one weightage for every ten years of service while granting selection time scale to the said teachers so as not to cause any loss to them ;

(*d*) if so, whether Government Order has been issued in this behalf ?

Sri M. MALLIKARJUNASWAMY (Minister for Education).—

(*a*) and (*b*) Time is required to give specific reply to this question as figures have to be obtained from each district.

(*c*) No.

(*d*) This question does not arise in view of reply to clause (*c*) above.

ಶ್ರೀ ಬಿ. ಜಿ. ಬಣಕಾರ್.—1-1-1970ಕ್ಕೆ ಮೊದಲು 20 ರಿಂದ 30 ವರ್ಷಗಳ ವರೆಗೆ ಮತ್ತು 30 ವರ್ಷಗಳಿಗೆ ಮೇಲ್ಪಟ್ಟು ಸೇವೆ ಸಲ್ಲಿಸಿರುವವರು ಎಷ್ಟು ಜನರಿದ್ದಾರೆ ?

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇತ್ತೀಚೆಗೆ ಎಲ್ಲ ಜಿಲ್ಲಾ ಡೆಪ್ಯುಟಿ ಡೈರೆಕ್ಟರುಗಳಿಂದಲೂ ಅಂಕಿ ಅಂಶಗಳು ಬಂದಿವೆ. ಅದರ ಪ್ರಕಾರ ನಮಗಾರು 43,156 ಜನಗಳಿಗೆ ಸೆಲೆಕ್ಷನ ಟೈಂ ಸ್ಕೇಲ ಸಿಕ್ಕಿದೆ. 16,323 ಜನರು 20 ರಿಂದ 30 ವರ್ಷ ಸರ್ವಿಸ್ ಹಾಕಿರುವವರಿದ್ದಾರೆ, 1,862 ಜನ 30 ವರ್ಷಕ್ಕಿಂತ ಹೆಚ್ಚು ಸೇವೆಯನ್ನು ಸಲ್ಲಿಸಿರುವವರಿದ್ದಾರೆ.

ಶ್ರೀ ಬಿ. ಜಿ. ಬಣಕಾರ್.—20-30 ವರ್ಷ ಸೇವೆ ಸಲ್ಲಿಸಿರುವ ಅನೇಕ ಜನ ಶಿಕ್ಷಕರು ಈ ಸ್ಕೇಲ್ ಕೊಡುವಾಗ ನಾನು ಎಸ್.ಎಸ್.ಎಲ್.ಸಿ. ಆಗಿದ್ದು ಮುಂದೆ ಎಸ್ ಎಸ್.ಎಲ್.ಸಿ. ಪಾಸಾಗಿದ್ದರೂ ಸಹಿತ ಅವರಿಗೆ ವೈಟೇಜ್ ಸ್ಕೇಲ್ ಸಿಕ್ಕಿಲ್ಲ. ಆ ಬಗ್ಗೆ ಅವರಿಂದ ಏನಾದರೂ ಮನವಿ ಬಂದಿದೆಯೇ? ಬಂದಿದ್ದರೆ ಅವರ ಮನವಿಯನ್ನು ಸಾಹಾರ್ದ ರೀತಿಯಿಂದ ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮನವಿ ಬಂದಿದೆ, ಅದನ್ನು ಪರಿಶೀಲನೆಮಾಡುತ್ತಿದ್ದೇವೆ.

ಶ್ರೀ ಬಿ. ಜಿ. ಬಣಕಾರ್.—ರಾಜ್ಯದಲ್ಲಿ ಖಾಸಗಿ ಪ್ರಾಥಮಿಕ ಶಾಲೆಗಳಿಗೆ ವೈಟೇಜ್ ಸ್ಕೇಲ್ ಮತ್ತು ಸೆಲೆಕ್ಷನ್ ಟೈಂ ಸ್ಕೇಲ್ ಕೊಡುತ್ತಿದ್ದೀರಾ; ಕೊಡುತ್ತಿಲ್ಲವೆಂದರೆ ಅವರಿಗೂ ಕೂಡ ಈ ಸೌಲಭ್ಯವನ್ನು ಒದಗಿಸುವುದಕ್ಕೆ ಏರ್ಪಾಡು ಮಾಡುತ್ತಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದನ್ನು ನಾನು ತಕ್ಷಣ ಇಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ವಿ. ಎಂ. ಫಾಡಿ.—ಖಾಸಗಿ ಶಾಲೆಯಲ್ಲಿ ಸೇವೆಯನ್ನು ಸಲ್ಲಿಸಿದ ನಂತರ ಡಿಸ್ಟ್ರಿಕ್ಟ್ ಸ್ಕೂಲ್ ಬೋರ್ಡ್‌ನಲ್ಲಿ ಅವರ ಸೇವೆಯನ್ನು ತೆಗೆದುಕೊಂಡರು. ತದನಂತರ ಸರ್ಕಾರದವರು ತೆಗೆದು ಕೊಂಡರು. ಇಂಥ ಜನರು ಖಾಸಗಿ ಶಾಲೆಯಲ್ಲಿ ಸಲ್ಲಿಸಿದ ಸೇವೆಯನ್ನು ಪೆನ್‌ಷನ್ ಮತ್ತು ಬೇರೆ ವಿಚಾರಗಳಿಗೆ ಗಣನೆಗೆ ತೆಗೆದುಕೊಂಡು ಏನು ಲಾಭ ಬರಬೇಕೋ ಅದನ್ನು ಒದಗಿಸಿಕೊಡುತ್ತಾರೆಯೇ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರು ದಯಮಾಡಿ ಪ್ರತ್ಯೇಕ ಪ್ರಶ್ನೆ ಹಾಕಿದರೆ ಒಳ್ಳೆಯದು.

ಶ್ರೀ ಬಿ. ಜಿ. ಬಣಕಾರ್.—ರಾಜ್ಯದಲ್ಲಿ ಅನೇಕ ಜನ ಪ್ರಾಥಮಿಕ ಶಾಲೆಗಳ ಶಿಕ್ಷಕರು ಹೆಡ್‌ಮಾಸ್ಟರಾಗಿದ್ದಾರೆ. ಮಾಧ್ಯಮಿಕ ಶಾಲೆಯಲ್ಲಿ ಕೆಲಸ ಮಾಡುವ ಹೆಡ್‌ಮಾಸ್ಟರುಗಳಿಗೆ ಪ್ರತ್ಯೇಕ ಸ್ಕೇಲ್ ಇದೆ. ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುವ ಹೆಡ್ ಮಾಸ್ಟರುಗಳಿಗೆ ಹೆಚ್ಚಿನ ಜವಾಬ್ದಾರಿ ಇರುವುದರಿಂದ ಅವರಿಗೂ ಹೆಚ್ಚಿನ ಸ್ಕೇಲ್ ಮಾಡುವ ವಿಚಾರವನ್ನು ಯೋಚನ ಮಾಡುತ್ತಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರು ಕೇಳಿರುವುದು ಟೈಂ ಸ್ಕೇಲ್ ಪ್ರಶ್ನೆ. ಈಗ ಹಾಕುತ್ತಿರುವ ಪ್ರಶ್ನೆ ಬೇರೆ.